# ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA - CHM. ಫೋನ್ : 114

?ನೇ ವರ್ಷ 11ನೇ ಸಂಚಿಕೆ ಕೊಪ್ಪ 12-11-1989 ಭಾನುವಾರ ಬೆಲೆ 60 ಪೈಸೆ


## ಜನತಾ ಬೆಂಬಲಿಗನ ಮೇಲೆ ಹಲ್ಲೆ

ಕೊಪ್ಪ: ನ 9ರಂದು ರಾತ್ರಿ ಬಂಡಿಗಡಿಯಲ್ಲಿ ಹೊಸೂರಿನ ಸತೀಶ ಎಂಬ ಯುವಕನಿಗೆ ಹಾರೊಬೈಲು ಸತೀಶ್, ಕುಂಬಕೊಡಿಗೆ ಗುಂಡ, ಕಾರಂಗಿ -ರಾಮಸ್ವಾಮಿ ಮತ್ತು ವಿಜಯೇಂದ್ರ ಎಂಬವರು ದೊಣ್ಣೆಯಿಂದ ತೀವ್ರ ಹಲ್ಲೆ ನಡೆಸಿದ್ದಾಗಿ ದೂರಲಾಗಿದೆ.

ಸತೀಶನಿಗೆ ಕೊಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಹರಿಹರಪುರ ದಫೇದಾರ್ ಗಣೇಶಯ್ಯ ತನಿಖೆ ನಡೆಸುತ್ತಿದ್ದಾರೆ.

ಕನ್ಮರಡಿಯಲ್ಲಿ ಅಂದು ನಡೆದ [illegible] ಪಕ್ಷದ ಶ್ರೀಮತಿ ರತ್ನಮ್ಮ ವ[illegible] ಅವರ ಸಭೆಯಲ್ಲಿ ಪಕ್ಷಕ್ಕೆ ಜೈಕಾರ [illegible] ಕ್ಕಾಗಿ 'ದಳ'ದ ಈ ಮಂದಿ ಹಲ್ಲೆ ನಡೆಸಿದರೆಂದು ದೂರಿನಲ್ಲಿ ತಿಳಿಸಲಾಗಿದ್ದು, ಜನತಾ ಪಕ್ಷ ಈ ಹಲ್ಲೆಯನ್ನು ತೀವ್ರವಾಗಿ ಖಂಡಿಸಿದೆ.

ರಾಮಪ್ಪಯ್ಯ ಅಚಲ; ಕಾಡಪ್ಪ ಗೌಡ ಕಾಂಗ್ರೆಗೆ;

# ಕಾವೇರದ ಚುನಾವಣೆ: ನೀರಸ ವಾತಾವರಣ

ಕೊಪ್ಪ: ಚುನಾವಣೆ ಹತ್ತಿರವಾಗುತ್ತಿದ್ದರೂ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಚಾರದ ಕಾವು ಇನ್ನೂ ಅಷ್ಟಾಗಿ ಕಂಡು ಬರುತ್ತಿಲ್ಲ. ಶೃಂಗೇರಿಯ ಕೆ. ವಿ. ರಾಮಪ್ಪಯ್ಯ ಕಾಂಗ್ರೆ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿ ಗಟ್ಟಿಯಾಗಿ ಉಳಿದಿದ್ದಾರೆ. ಇತ್ತ ನಾರ್ವೆಯ ಕಾಡಪ್ಪ ಗೌಡ ಮತ್ತೆ ಕಾಂಗ್ರೆ ಸೇರಿದ್ದಾರೆ. ಜನತಾ ಪಕ್ಷ ಮತ್ತು ಸಿಪಿಐ ಕೂಡ ತಮ್ಮ ತಮ್ಮ ಪ್ರಚಾರ ಕಾರ್ಯವನ್ನು ಜೀವಂತವಾಗಿಟ್ಟಿವೆ. ಮತದಾರರ ಒಲವು ಮಾತ್ರ ಅಸ್ಪಷ್ಟವಾಗಿದೆ.

**ಚುನಾವಣೆ ಘೋಷಣೆಯ ಆರಂಭದ ದಿನಗಳವರೆಗೂ ಈ ಕ್ಷೇತ್ರ ಕಾಂಗ್ರೆಗೊಂದು ಸುಲಭದ ತುತ್ತು ಎಂಬ ಅಭಿಪ್ರಾಯವಿದ್ದುದು ಈಗ ಬದಲಾಗುವಂತಾಗಿದೆ. ಗೋವಿಂದಗೌಡರ ಸ್ಥಿತಿ ಸಾಕಷ್ಟು ಸುಧಾರಿಸಿರುವಂತೆ ಕಂಡು ಬರುತ್ತಿದೆ.**

ಹಿಂದಿಗಿಂತಲೂ ಹೆಚ್ಚು ತೀವ್ರವಾಗಿ ಚುನಾವಣೆ ಚಟುವಟಿಕೆಗೆ ಧುಮುಕಿರುವ ಎಚ್'.ಜಿ ವೆಂಕಟೇಶ್, ಜನತಾ ಪಕ್ಷಕ್ಕೆ ಬೆಂಬಲ ಘೋಷಿಸಿಕೊಂಡಿರುವ ಪ್ರತಿಯೊಬ್ಬ ಕಾರ್ಯಕರ್ತರನ್ನೂ ಅಭಿಮಾನಿಗಳನ್ನೂ ಭೇಟಿ ಮಾಡಿ ಅವರ ಮನವೊಲಿಸುತ್ತಿದ್ದ್ದು ಹಗಲೂ-ರಾತ್ರಿ ಎಂಬ ಪರಿವೆಯಿಲ್ಲದೆ ಸುತ್ತುತ್ತಿದ್ದಾರಂತೆ. ಜೊತೆಗೆ ಹಣವನ್ನೂ ನೀರಿನಂತೆ ಖರ್ಚು ಮಾಡುತ್ತಿದ್ದಾರೆನ್ನಲಾಗಿದೆ.

ಶೃಂಗೇರಿಯಲ್ಲಿ ರಾಮಪ್ಪಯ್ಯನಿಗೆ ಕೇವಲ ಬ್ರಾಹ್ಮಣ ಮಹಾ ಸಭೆ ಮಾತ್ರ ಬೆಂಬಲ ನೀಡಬಹುದೆಂದುಕೊಂಡಿದ್ದ ರಾಮಣ್ಣ ಬೆಂಬಲಿಗರಿಗೆ ಸ್ವಲ್ಪ ಆಘಾತ ಕಾದಿರುವಂತೆ ಕಾಣುತ್ತದೆ. ಟಿಕೆಟ್ ನೀಡಿಕೆಯಲ್ಲಿನ ಗೊಂದಲ-ಕಿತ್ತಾಟಗಳು, ಶೃಂಗೇರಿಗೆ ಪ್ರಾತಿನಿಧ್ಯ ಬೇಕೆಂಬ ಬೇಡಿಕೆ. ಜೊತೆಗೆ ತಾರದೇವಿಗೆ 'ಅನ್ಯಾಯ'ವಾದದ್ದು—ಎಲ್ಲವೂ ಸೇರಿ, ಶೃಂಗೇರಿ ತಾಲ್ಲೂಕಿನ ಕಾಂಗ್ರೆ ಬಹುತೇಕ ರಾಮಪ್ಪಯ್ಯನಿಗೆ ಬೆಂಬಲವಾಗಿ ನಿಂತಂತೆ ಕಾಣುತ್ತಿದೆ.

ಆದರೆ ಜನತಾ ಪಕ್ಷವೂ ಸಾಕಷ್ಟು ಮತಗಳನ್ನು ಗಳಿಸುವ ನಿರೀಕ್ಷೆ ಕಂಡು ಬರುತ್ತಿದ್ದು, ಇದರಲ್ಲಿ ಹೆಚ್ಚಿನದು ಜನತಾ ದಳಕ್ಕೆ 'ಮೈನಸ್' ಆಗುವುದರಿಂದ ಕಾಂಗ್ರೆನ ಪಕ್ಷ ಸ್ವಲ್ಪ 'ಕೂಡಿ' ಬರಬಹುದು.

ರಾಮಪ್ಪಯ್ಯ ಸ್ಪರ್ಧೆಯಿಂದ ನಿವೃತ್ತರಾಗಿದ್ದಾರೆಂಬ ಒಂದು ವ್ಯವಸ್ಥಿತ ಪ್ರಚಾರ ತೀರ್ಥಹಳ್ಳಿಯ ಪತ್ರಿಕೆಯೊಂದರಿಂದ ನಡೆದುದು ಹಲವು ವರ್ಣರಂಜಿತ ಘಟನೆಗಳಿಗೆ ಕಾರಣವಾಗಿ ಸಾರ್ವಜನಿಕರಿಗೆ ಒಂದಷ್ಟು ಮನರಂಜನೆ ನೀಡಿತೆಂಬುದು ಕೊಪ್ಪದಲ್ಲಿ ತಾಜಾ, ಕುರು-ಕುರು ಸುದ್ದಿ !

### ಯೋಗಾಸನ ಶಿಬಿರ

ಜಯಪುರ : ಇಲ್ಲಿ ಅ 15ರಿಂದ 30ರವರೆಗೆ ನಡೆದ ಯೋಗಾಸನ ಶಿಬಿರದ ಮುಕ್ತಾಯ ಸಮಾರಂಭ ಗುರುನಾಥರಾವ್ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ|| ಎಚ್. ಜಿ. ಸತೀಶ್ ಮತ್ತು ನಿರ್ಮಲ್ ಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ಶಿಕ್ಷಕರಾದ ಉಮೇಶ್ ಅವರಿಗೆ ಕಿರುಕಾಣಿಕೆ ನೀಡಿ ಸನ್ಮಾನಿಸಲಾಯಿತು. 30 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಇಲ್ಲಿನ ವಲ್ಲಭ ತಾರು ಸ್ಪೋರ್ಟ್ಸ್ ಕ್ಲಬ್, ಹೊಸಕೊಪ್ಪ ಮೇರುತಿ ಜೇಸೀಸ್ ಮತ್ತು ಹರಿಹರಪುರ ಪ್ರಬೋಧಿನಿ ವಿಶ್ವಸ್ಥ ಮಂಡಳಿ ಸಂಯುಕ್ತವಾಗಿ ಈ ಶಿಬಿರ ಏರ್ಪಡಿಸಿತ್ತು.

(ವರದಿ: ಕೃಷ್ಣ ಭಂಡಾರಿ)

ಚುನಾವಣೆ ಕಾವಿನ ದುರುಪಯೋಗ-ಅರಣ್ಯೋತ್ಪನ್ನ ಲೂಟಿ:

## ಗಾರ್ಡ್ ಮೇಲೆ ಹಲ್ಲೆನಡೆಸಿ, ಬಂದೂಕಿನೊಂದಿಗೆ ಪರಾರಿಯಾದ ತಂಡಕ್ಕಾಗಿ ತೀವ್ರ ಶೋಧ

ಬಾಳೆಹೊನ್ನೂರು: ಇಲ್ಲಿಗೆ ಸಮೀಪದ ಹುಯಿಗೆರೆ ಕ್ರಾಸ್ ಬಳಿ ನ. 8ರ ರಾತ್ರಿ ಗಸ್ತಿನಲ್ಲಿದ್ದ ಕೊಪ್ಪ ಅರಣ್ಯ ವಿಭಾಗದ ಸಿಬ್ಬಂದಿ, ಅನುಮಾನಾಸ್ಪದವಾಗಿ ಬರುತ್ತಿದ್ದ ಸಿ.ಟಿ.ಆರ್.ಡಬ್ಲ್ಯು 787 ನಂಬರಿನ ಲಾರಿಯನ್ನು ತಡೆದು ತಪಾಸಿಸುತ್ತಿದ್ದಾಗ, ಅದರಲ್ಲಿದ್ದ ಸುಮಾರು 25 ಜನ ಏಕಾಏಕಿ ಸಿಬ್ಬಂದಿಯ ಮೇಲೆ ದಾಳಿ ಮಾಡಿ, ಗಾರ್ಡ್ ಟಿ.ವಿ. ಲಕ್ಷ್ಮೀನಾರಾಯಣ ಅವರನ್ನು ತೀವ್ರವಾಗಿ ಗಾಯಗೊಳಿಸಿ, ತಂಡದ ಬಂದೂಕನ್ನೂ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಈ ಬಗ್ಗೆ ವಲಯ ಅರಣ್ಯಾಧಿಕಾರಿ ಇಸ್ಮಾಯಿಲ್ ಪೋಲೀಸರಿಗೆ ದೂರು ನೀಡಿದ್ದಾರೆ. ಲಾರಿ ಭರ್ತಿ ಗಂಧ ಸಾಗಿಸಿದ್ದಾಗಿ ಶಂಕಿಸಲಾಗಿತ್ತು.

ಆದರೆ ಕಳ್ಳಸಾಗಣೆಯಾದುದು ಸಾಗುವಾನಿ ಮರವಾಗಿದ್ದು, ಪೂರ್ತಿ ಮಾಲು ವಶವಾಗಿದೆ; ಅಪರಾಧಿಗಳಿಗಾಗಿ ತೀವ್ರ ಶೋಧ ನಡೆಯುತ್ತಿದೆ ಎಂದು ಅರಣ್ಯ ಇಲಾಖೆಯ ಮೂಲಗಳಿಂದ ತಿಳಿದು ಬಂದಿದೆ.

ಚುನಾವಣೆಯ ಗೊಂದಲದ ದುರುಪಯೋಗ ಪಡೆದು ಅಮೂಲ್ಯ ಅರಣ್ಯೋತ್ಪನ್ನಗಳು ಅವಾರವಾಗಿ ಕಳ್ಳ ಸಾಗಣೆಯಾಗುವುದು ಎಂದಿನಿಂದಲೂ ನಡೆದು ಬಂದಿರುವುದೇ ಆಗಿದ್ದು, ಈ ಅವಧಿ ಅರಣ್ಯ ಸಿಬ್ಬಂದಿಗಳಿಗೆ ತೀಕ್ಷ್ಣ ಪರೀಕ್ಷೆಯದಾಗುವುದು ನಿಃಸಂಶಯ.

### ಸಿಪಿಐಗೆ ಬೆಂಬಲ

ಕೊಪ್ಪ: ಶೃಂಗೇರಿ, ಕೊಪ್ಪ, ನ. ರಾ ಪುರ ತಾ||ಗಳ ಬರಿಗಾಲ ವೈದ್ಯರ (ಆರೋಗ್ಯ ಮಾರ್ಗದರ್ಶಿಗಳ) ಸಂಘ ಮತ್ತು ಸಾರಾಯಿ ಮಾರಾಟಗಾರರ ಸಂಘ ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸಿರುವುದಾಗಿ ಸಿಪಿಐ ಕಾರ್ಯದರ್ಶಿ ಎಲ್. ಆರ್. ರಾಮಚಂದ್ರ ತಿಳಿಸಿದ್ದಾರೆ.

### ವಯಸ್ಕರ ಶಿಕ್ಷಣ ಉದ್ಘಾಟನೆ

ಶೃಂಗೇರಿ : "ಶಿಕ್ಷಣ ಪಡೆದವರೆಲ್ಲ ಸುಖವಾಗಿರುತ್ತಾರೆ ಎಂಬ ಕಲ್ಪನೆ ತಪ್ಪು. ಅವರೂ ಕಲಿತವರ ದಬ್ಬಾಳಿಕೆಯನ್ನು ಎದುರಿಸಲು ಶಿಕ್ಷಣ ಅಗತ್ಯ" ಎಂದು ಹೆಸುವದನ ಉಪಾಧ್ಯ ಅವರು ಇಲ್ಲಿಗೆ ಸಮೀಪದ ವೈಕುಂಠಪುರದಲ್ಲಿ ರಾಜ್ಯೋತ್ಸವದಂದು ವಯಸ್ಕರ ಶಿಕ್ಷಣವನ್ನು ಉದ್ಘಾಟಿಸುತ್ತ ನುಡಿದರು.

ಶ್ರೀಮತಿ ಶಾರದರವರು ಅಕ್ಷರ ಜ್ಞಾನದ ಅನಿವಾರ್ಯತೆ ಬಗ್ಗೆ, ಹಾಗೂ ಮಹಿಳೆ ಶಿಕ್ಷಣ ಪಡೆದಲ್ಲಿ ಕುಟುಂಬದ ಕೈಕ್ಷಣಿಕ ಪ್ರಗತಿಯ ಸಾಧ್ಯತೆಯನ್ನು ಕುರಿತು ಮಾತನಾಡಿದರು.

ಇಲ್ಲಿನ 'ಸಮುದಾಯ' ಸ್ನೇಹಿತರು ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ಸೂರ್ಯನಾರಾಯಣ ಸ್ವಾಗತಿಸಿ, ಶೃಂಗೇಶ್ವರ ಪ್ರಾಸ್ತಾವಿಕ ಭಾಷಣ ಮಾಡಿ, ಸೀತಾರಾಮ್ ವಂದಿಸಿದರು.

(ವರದಿ : ವೈ.ಗ. ಜಗದೀಶ್)

### ಬೇಲಿ ತಂತಿ ಕದ್ದ ಗಾರ್ಡ್ ಬಂಧನ

ಕೊಪ್ಪ: ಕಳೆದ ವರ್ಷ ಇಲ್ಲಿನ ಡಿಎಫ್ಒ ಕಛೇರಿ ಆವರಣದಿಂದ ಬೇಲಿ ತಂತಿ ಕಳುವಾಗಿದ್ದ ಸಂಬಂಧದಲ್ಲಿ ಗಾರ್ಡ್ ಮಹದೇವು ವನ್ನು ಸರ್ಕಲ್ ಇನ್ಸ್‌ಪೆಕ್ಟರ್ ಕೇಶವಾನಂದ ಬಂಧಿಸಿದ್ದಾರೆ. ಪುರಭವನದ ಟಿ.ವಿ. ಕದ್ದು ಕಳೆದ ವಾರ ಬಂಧಿತನಾಗಿದ್ದ ನಾಗರಾಜನಿಗೆ ಈತನೇ ತಂತಿ ಕದ್ದುಕೊಟ್ಟಿದ್ದನೆಂದು ತಿಳಿದು ಬಂದಿದೆ.

# ಊರಿನಲ್ಲಿ ಪಾನ ನಿರೋಧಕ್ಕಾಗಿ ಮೆಣಸೆ ಯುವಕ ಮಂಡಲದ ಮಾದರಿ ಪ್ರಯತ್ನ

● ಕಲ್ಕುಳಿ ವಿಠಲ ಹೆಗ್ಡೆ

ಇಂದು ಹೆಚ್ಚಿನ ಯುವಕ ಸಂಘಗಳ ಮಹತ್ಸಾಧನೆ ಎಂದರೆ 'ಭಾರೀ' ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ತಪ್ಪು ತೀವಲು ತೀರಿಸಿಕೊಂಡು, ಸರ್ಕಾರದ ಒಂದಷ್ಟು ಅನುದಾನವನ್ನೂ ಪಡೆಯುವಷ್ಟಕ್ಕೆ ಸೀಮಿತವಾಗಿರುವುದು ಗುಟ್ಟೇನಲ್ಲ. ಇಂಥವುಗಳ ಮಧ್ಯೆ, ಇಲ್ಲಿಗೆ ಸಮೀಪದ ಮೆಣಸೆ ಯುವಕ ಮಂಡಲ ತನ್ನೂರಿಗೆ ಉಪಕಾರವಾಗುವಂಥ ಸಾರ್ವಜನಿಕ ಕೆಲಸವೊಂದಕ್ಕೆ ಕೈ ಹಚ್ಚಿದೆ.

ಶೃಂಗೇರಿ ಪೇಟೆಗೆ ಅತಿ ಹತ್ತಿರದಲ್ಲಿರುವ ಮೆಣಸೆ ಈಗ ಸಾಕಷ್ಟು ಜನ ಸಂಖ್ಯೆ ಹೊಂದಿರುವುದರ ಜೊತೆಗೆ ಪೇಟೆ ಬೆಳೆಯಲು ಪ್ರಶಸ್ತ ಜಾಗವೂ ಆಗಿದೆ. ಈ ಊರಿನಲ್ಲಿ ಪಾನ ನಿಷೇಧಕ್ಕೆ ಪ್ರಯತ್ನಿಸಿರುವುದೇ ಈ ಯುವಕ ಮಂಡಲ ಕೈಗೊಂಡಿರುವ ಸ್ತುತ್ಯ ಕಾರ್ಯವಾಗಿದೆ.

ಮೊದಲಿಗೆ, ಈ ಊರಿನ ಶಾಲೆಯ ಹತ್ತಿರ ಸಾರಾಯಿ ಅಂಗಡಿ ಬೇಡ ಎಂಬುದಾಗಿ ಶುರುವಾದ ಪ್ರಕರಣ, "ನಮ್ಮೂರಿನಲ್ಲೇ ಸಾರಾಯಿ ಅಂಗಡಿ ಬೇಡ" ಎಂಬ ಹಂತಕ್ಕೆ ಬಂದು ಮುಟ್ಟಿದೆ. ಈ ಬಗ್ಗೆ ತಮ್ಮ ಪ್ರತಿಭಟನೆಯನ್ನು ಇಲ್ಲಿನ ಹೆಂಗಸರು-ಮಕ್ಕಳಾದಿಯಾಗಿ ಎಲ್ಲ ನಾಗರಿಕರೂ ಸೇರಿ ಸೂಚ್ಯವಾಗಿ ತಹಸೀಲ್ದಾರ್ ಮತ್ತು ಸಬ್ ಇನ್ಸ್‌ಪೆಕ್ಟರ್‌ಗೆ ತಿಳಿಸಿದ್ದು, ಎಲ್ಲ ಮೇಲಧಿಕಾರಿಗಳು ಮತ್ತು ರಾಜಕಾರಣಿಗಳ ಗಮನಕ್ಕೂ ತಂದಿದ್ದಾರೆ.

### ನಿರಂಕುಶ ಸಾರಾಯಿ

ಒಂದು ರೀತಿಯಲ್ಲಿ ಸಾರಾಯಿಯದು ನಿರಂಕುಶ ಪ್ರಭುತ್ವ ಎಂದರೆ ತಪ್ಪಾಗಲಾರದು. ಅದನ್ನು ಪ್ರಶ್ನಿಸುವವರೇ ಇಲ್ಲ ಪ್ರಶ್ನಿಸಿದರೂ ಅದಕ್ಕೆ ಯಾರೂ ಸೊಪ್ಪು ಹಾಕುವುದಿಲ್ಲ. ಒಂದು ಊರಿನಲ್ಲಿ ಆಸ್ಪತ್ರೆ, ಶಾಲೆ ಇತ್ಯಾದಿ ಯಾವುದೇ ಸಾರ್ವಜನಿಕ ಸೌಕರ್ಯ ಇರದಿದ್ದರೂ ಸಾರಾಯಿ ಅಂಗಡಿ ಇದ್ದೇ ಇರುತ್ತದೆ. ಅಷ್ಟೇಕೆ, ಒಂದು ಊರಿನ ಶಾಲೆ - ಆಸ್ಪತ್ರೆಗಳಂಥವನ್ನು ಮುಚ್ಚುವುದಾದರೂ ಇಂದು ಕಷ್ಟದ ಕೆಲಸವಲ್ಲ. ಆದರೆ, ಒಂದು ಹೆಂಡದಂಗಡಿಯನ್ನು ಮಾತ್ರ ಮುಚ್ಚುವುದಿರಲಿ ಸ್ಥಳಾಂತರಿಸುವುದು ಕೂಡ ಸಾಮಾನ್ಯದ ಕೆಲಸವಲ್ಲ.

ಏಕೆಂದರೆ ಹೆಂಡದ ಮೂಲಕ ಸಾರ್ವಜನಿಕರನ್ನು—ಬಡಬಗ್ಗರನ್ನು— ಸುಲಿದು, ಹೆಂಡದೊಡೆಯರು ಸಂಬಂಧಿಸಿದ ಅತ್ಯುನ್ನತ ಅಧಿಕಾರಿಗಳನ್ನೆಲ್ಲ ತಮ್ಮ 'ಮಾಮೂಲಿ'ನ ಎಂಜಲಲ್ಲಿ ಕೆಡವಿಕೊಂಡಿರುವುದರಿಂದ, ಯಾವನೇ ಅಧಿಕಾರಿ ಹೆಂಡದಂಗಡಿಗಳ ವಿರುದ್ಧದ ಇಂಥ ಉಪಕಾರಿ ಕೆಲಸಕ್ಕೆ ಪ್ರೋತ್ಸಾಹಿಸಲಾರ. ಅದಕ್ಕನುಗುಣವಾಗಿಯೇ ಅಬಕಾರಿ ಇಲಾಖೆಯ ನೀತಿ-ನಿಯಮಗಳೂ ರೂಪುಗೊಂಡಿರುತ್ತವೆ. ಒಮ್ಮೆ ಪರವಾನಗಿ ಸಿಕ್ಕಿತೆಂದರೆ ಮತ್ತೆ ಯಾರೂ ಅದನ್ನು 'ಅಲುಗಾಡಿಸುವುದು' ಕಷ್ಟ. ಇಂಥ ಪ್ರಯತ್ನಕ್ಕೆ ಕೈ ಹಚ್ಚಿದವರಿಗಷ್ಟೇ ಇದು ಗೊತ್ತು.

### ಪ್ರತಿಭಟನೆಗೆ ಸಜ್ಜು

ಈ ಬಗ್ಗೆ ಜಾಗ್ರತೆ ಇರುವ ಮೆಣಸೆ ಯುವಕ ಮಂಡಲದವರು ಎಲ್ಲ ರೀತಿಯಲ್ಲೂ ಪ್ರತಿಭಟನೆಗೆ ಸಜ್ಜಾಗಿದ್ದಾರಂತೆ ಅಂತೂ ಈ ಯುವಕ ಸಂಘದವರ ಕೆಲಸ ಬೇರೆ ಯುವ ಸಂಘಟನೆಗಳಿಗೊಂದು ಮಾದರಿಯಾಗುವಂಥದು ಎಂಬುದರಲ್ಲಿ ಸಂಶಯವಿಲ್ಲ ಇಂಥ ಜನ ಹಿತ ಚಟುವಟಿಕೆಗಳಿಂದ ಸಂಘಟನೆಗೆ ಕೂಡ ಬೆಲೆ ಬರಬಲ್ಲದು.

---

ಪದ್ಯದಂಗಳ

## ಮತ ಭಿಕ್ಷೆ

ಓ ನಮ್ಮ ನಾಡಿನ ಮತದಾರ ಬಾಂಧವನೆ,
ಬಂದಿಹುದು ಈಗ ಮತ್ತೊಂದು ಚುನಾವಣೆ
ಏಳಯ್ಯ ! ನೋಡಿಲ್ಲಿ ಬಂದಿಹೆನು ನಾನು
ನಿನಗಾಗಿ ದುಡಿಯುತಿಹ ನಾಡ ಸೇವಕನು
ಹೇಗಿದ್ದಿ ನೀನೀಗ? ಕುಶಲವೆ? ಹೇಳು
ನಿನ ಕುರಿತೆ ಚಿಂತಿಸುವೆ ನಾ ಸದಾ ಕೇಳು
ನಾ ಬಂದ ಕಳೆದೈದು ವರ್ಷಗಳ ಹಿಂದೆ
ನಿನ್ನಯ ಸ್ಥಿತಿಯನ್ನು ನಾ ನೋಡಿ ನೊಂದೆ
ತುಡಿಯುತಿದೆ ಎನ್ನ ಮನ ನಿನ್ನ ಸೇವೆಗೆ
ಇಂದು
ಆದಕಾಗಿ ಕೇಳುತಿಹೆ ಮತವ ನೀಡೆನಗೆಂದು
ನನ್ನಿಂದ ನಿನಗೆ ಆಗಬೇಕಿಹುದೇನು ?
ಮಾಡದರ ಪಟ್ಟಿಯನು ನಾ ಮಾಡಿ
ಕೊಡುವೆನು
ಮತವೊಂದನೀಡಿ ನೀ ಎನ್ನ ಗೆಲ್ಲಿಸು ಇಂದು
ಇನ್ನೈದು ವರ್ಷ ನಾ ನಿನ್ನ ಕಾಡೆನೆಂದೂ

—ಟಿ. ಕೆ. ಮಂಜುನಾಥ್
ತಲವಾನಿ

---

# ಚುನಾವಣೆ: ಅಂಕಿ - ಅಂಶಗಳು

ಶೃಂಗೇರಿ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಶೃಂಗೇರಿ, ಕೊಪ್ಪ, ನ. ರಾ. ಪುರ ಈ ಮೂರೂ ತಾ|| ಗಳನ್ನೊಳಗೊಂಡಂತೆ ಈ ಬಾರಿ ಒಟ್ಟು ಮತದಾರರ ಸಂಖ್ಯೆ 1,16,827. ಇದರಲ್ಲಿ ಮಹಿಳೆಯರ ಸಂಖ್ಯೆ 57240, ಪುರುಷರ ಸಂಖ್ಯೆ 59587 ಈ ವರ್ಷ ಹೊಸದಾಗಿ ಮತದಾನದ ಅರ್ಹತೆ ಪಡೆದಿರುವ 18 ರಿಂದ 21 ವರ್ಷದೊಳಗಿನ ಯುವಕ-ಯುವತಿಯರೂ ಇವರಲ್ಲಿ ಸೇರಿದ್ದಾರೆ ಕ್ಷೇತ್ರದಲ್ಲಿ ಒಟ್ಟು 172 ಮತಗಟ್ಟೆಗಳಿರುತ್ತವೆ

ಕಳೆದ ಬಾರಿ (1985) ನಡೆದ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ 90,477 ಮತದಾರರಿದ್ದು, 159 ಮತಗಟ್ಟೆಗಳಿದ್ದವು. ಆಗ ಜನತಾದ ಎಚ್. ಜಿ. ಗೋವಿಂದ ಗೌಡ 30529 ಮತಗಳಿಸಿ, 30,446 ಮತಗಳಿಸಿದ ಕಾಂಗ್ರೆಸ್‌ನ ಯು. ಕೆ. ಶಾಮಣ್ಣ ಅವರಿಗಿಂತ ಕೇವಲ 83 ಮತಗಳ ಅಂತರದಿಂದ ಜಯ ಗಳಿಸಿದ್ದರು ಬಿಜೆಪಿ ಅಭ್ಯರ್ಥಿ ಎ. ಎಂ. ಶ್ರೀಕಂಠ ಗೌಡ 3827 ಮತಗಳಿಸಿದ್ದರು. 1983 ರ ಚುನಾವಣೆಯಲ್ಲಿ ಗೋವಿಂದ ಗೌಡರು ಬೇಗಾನೆ ರಾಮಯ್ಯನವರನ್ನು 5900 ಕ್ಕೂ ಹೆಚ್ಚು ಮತಗಳಿಂದ ಸೋಲಿಸಿದ್ದರು.

ಈ ಬಾರಿ ಮತ್ತೊಮ್ಮೆ ಯು. ಕೆ. ಶಾಮಣ್ಣ ಮತ್ತು ಗೋವಿಂದ ಗೌಡ ಮುಖಾ ಮುಖಿಯಾಗಿದ್ದಾರೆ.

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು (1,23279 ಮತದಾರರು) ಹಾಗೂ ಕಾರ್ಕಳ ತಾಲ್ಲೂಕಿನ ಕೆಲ ಭಾಗಗಳು (1,09,036 ಮತದಾರರು) ಸೇರಿ ಒಟ್ಟು 2,32,315 ಜನ ಮತದಾರರು ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ 9,40 257 ಮತದಾರರು-ಒಟ್ಟು 11 ಲಕ್ಷ 72 ಸಾವಿರದ 572 ಜ... (11,72 572) ಮತದಾರರಿದ್ದಾರೆ.

ಜಿಲ್ಲೆಯ ಲೋಕ ಸಭಾ ಕ್ಷೇತ್ರದ ಮತದಾರರಲ್ಲಿ 4,72,817 ಮಂದಿ ಪುರುಷರು ಮತ್ತು 4,67,440 ಮಂದಿ ಮಹಿಳೆಯರು ಇದ್ದಾರೆ. ಇವರಲ್ಲಿ 18-2... ವಯೋಮಾನದ 26,029 ಪುರುಷ ಮತ... 28,951 ಮಂದಿ ಮಹಿಳಾ ಮತದಾರರೂ ಇದ್ದಾರೆ.

(3ನೇ ಪುಟಕ್ಕೆ)

# ಚುನಾವಣೆ ಕಣಕ್ಕೆ ದಲಿತ ಸಂಘರ್ಷ ಸಮಿತಿ: ಸ್ವತಂತ್ರವಾಗಿ ಸ್ಪರ್ಧೆ

ಕಳೆದ ಸುಮಾರು 17 ವರ್ಷಗಳಿಂದ ರಾಜ್ಯದ ಎಲ್ಲ ಜಿಲ್ಲೆ ತಾಲ್ಲೂಕುಗಳಲ್ಲೂ ಹಬ್ಬಿ ಬೆಳೆದಿರುವ ದಲಿತ ಸಂಘರ್ಷ ಸಮಿತಿ ಇದೇ ಮೊದಲ ಬಾರಿಗೆ ಚುನಾವಣಾ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸುವ ನಿರ್ಧಾರ ತಳೆದಿದೆ ಈ ದಿಸೆಯಲ್ಲಿ ಪ್ರಗತಿರಂಗ, ರೈತ ಸಂಘ ಮತ್ತಿತರ ಪ್ರಗತಿಪರ ಸಂಘಟನೆಗಳೊಡಗೂಡಿ ಪರ್ಯಾಯ ರಾಜಕೀಯ ಶಕ್ತಿಯೊಂದನ್ನು ರೂಪಿಸುವ ಕಾರ್ಯಕ್ಕೆ ದ ಸಂ ಸ ಕೈಗೂಡಿಸಿತ್ತು.

ಆದರೆ ರೈತ ಸಂಘ ಮತ್ತು ಪ್ರಗತಿರಂಗಗಳ ನಾಯಕರ ನಡುವಿನ ಬಗೆಹರಿಯದ ಭಿನ್ನಾಭಿಪ್ರಾಯದಿಂದಾಗಿ ಇದು ಸಾಧ್ಯವಾಗದೆ ಹೋಯಿತು. ಇಂಥ ಪರಿಸ್ಥಿತಿಯಲ್ಲಿ, ಕೆಲವಾದರೂ ಸ್ಥಾನಗಳನ್ನು ಗೆದ್ದು ವಿಧಾನ ಸಭೆಯಲ್ಲಿ ದಲಿತರ ಮತ್ತು ಎಲ್ಲ ಹಿಂದುಳಿದವರ, ಅಲ್ಪ ಸಂಖ್ಯಾತರ ಹಿತಕ್ಕೆ ಬಲ ಗಳಿಸಿಕೊಳ್ಳಬೇಕೆನ್ನುವ ಪ್ರಯತ್ನದ ಅಂಗವಾಗಿ ದಸಂಸ ಜನತಾ ದಳದ ಜೊತೆ ಚುನಾವಣಾ ಹೊಂದಾಣಿಕೆಗೆ ಯತ್ನಿಸಿತ್ತು.

ಇದಕ್ಕೆ ನಿಬಂಧನೆಯಾಗಿ ತನ್ನ ಐದಂಶಗಳ ಬೇಡಿಕೆಯನ್ನು ದಳದ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಬೇಕೆಂದು ಅದು ಒತ್ತಾಯಿಸಿತ್ತು. ಏಳನೇ ತರಗತಿವರೆಗಿನ ಶಿಕ್ಷಣವನ್ನೂ, ಅರಣ್ಯ ಹಾಗೂ ಶಿಲಾ ಸಂಪತ್ತನ್ನೂ ರಾಷ್ಟ್ರೀಕರಿಸಬೇಕು; ಬಗರ್ ಹುಕುಂ ಸಾಗುವಳಿದಾರರನ್ನು ಖಾಯಂಗೊಳಿಸಬೇಕು; ದಲಿತ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಮಕ್ಕಳಿಗಾಗಿ ಹೋಬಳಿಗೊಂದು ವಸತಿ ಶಾಲೆ ಆರಂಭಿಸಬೇಕು; ಎಲ್ಲ ಮೀಸಲಾತಿ ಸೌಲಭ್ಯವನ್ನೂ ಚಾಚೂ ತಪ್ಪದೆ ಅನುಷ್ಠಾನಗೊಳಿಸಬೇಕು-ಇವು ಅದರ ಬೇಡಿಕೆಗಳಾಗಿದ್ದವು

ಮೊದಲಿಗೆ ಈ ಷರತ್ತುಗಳನ್ನೆಲ್ಲ ಒಪ್ಪಿಕೊಂಡಿದ್ದ ದಳದ ನಾಯಕರು ಕೊನೇ

(3ನೇ ಪುಟಕ್ಕೆ)

# ಪರಿಸರದ ಪರವಾಗಿ ಲೋಕಸಭೆಗೆ 'ಭಾರ್ಗವ'ರ ಸ್ಪರ್ಧೆ

ತಮ್ಮ ತೊಂಬತ್ತರ ಹರೆಯದಲ್ಲೂ ಪರಿಸರ ಚಳುವಳಿಯಲ್ಲಿ ಆಳವಾಗಿ ತೊಡಗಿಸಿಕೊಂಡಿರುವ ಖ್ಯಾತ ಸಾಹಿತಿ, 'ಕಡಲ ಕರೆಯ ಭಾರ್ಗವ' ಶಿವರಾಮ ಕಾರಂತರು ಕಾರವಾರ ಕ್ಷೇತ್ರದಿಂದ ಲೋಕ ಸಭೆಗೆ ಪರಿಸರ ಸಂರಕ್ಷಣಾ ಸಮಿತಿಯ ಬೆಂಬಲದೊಡನೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ಕಾರಂತರನ್ನು ಬೆಂಬಲಿಸಿ ಜನತಾ ಪಕ್ಷ ಈ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿಲ್ಲ. ಬಿ. ಜೆ. ಪಿ ಅಭ್ಯರ್ಥಿ ಕಣದಿಂದ ನಿವೃತ್ತರಾಗಿದ್ದಾರೆ ಆದರೆ ಜನತಾ ದಳದಿಂದ ಸ್ಪರ್ಧಿಸಿರುವ ನಟ ಅನಂತ್ ನಾಗ್ ಮತ್ತು ಕಾಂಗ್ರೆಸ್‌ನ ದೇವರಾಯ ನಾಯಕ ಕಾರಂತರನ್ನು ಎದುರಿಸುತ್ತಿದ್ದಾರೆ.

ಈ ಇಬ್ಬರು ಅಭ್ಯರ್ಥಿಗಳು ಕೂಡ ಕಣದಿಂದ ನಿವೃತ್ತರಾಗಿ ಕಾರಂತರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂದು 'ಪಶ್ಚಿಮ ಘಟ್ಟ ಉಳಿಸಿ', 'ಅಪ್ಪಿಕೊ' ಮತ್ತಿತರ ಪರಿಸರ ಚಳುವಳಿಗಳ ನಾಯಕರು, ನಾಡಿನ ಖ್ಯಾತ ಸಾಹಿತಿಗಳು, ವಿಚಾರ ವೇತ್ತರು ಒತ್ತಾಯಿಸಿದ್ದಾರೆ.

ಈ ಮಧ್ಯೆ ಕಾರಂತ ಪೂರ್ವ ನಿಶ್ಚಿತ ಕಾರ್ಯಕ್ರಮದಂತೆ ವಿದೇಶ ಪ್ರವಾಸಕ್ಕೆ ಹೋಟಿದ್ದಾರೆ ಅವರು ಹಿಂದಿರುಗುವುದು ಚುನಾವಣೆ ಮುಗಿದ ನಂತರವೆಯೇ !

ಪರಿಸರ ಚಳುವಳಿ ಮುಖಂಡರು ಚುನಾವಣೆಯ ಖರ್ಚಿಗಾಗಿ "ಕಾರಂತ ನಿಧಿ" ಯೊಂದನ್ನು ಸ್ಥಾಪಿಸಿದ್ದು, ಪರಿಸರದ ಉಳಿವಿನ ಬಗ್ಗೆ ಕಾಳಜಿಯಿರುವವರೆಲ್ಲರೂ ಈ ನಿಧಿಗೆ ಉದಾರ ದೇಣಿಗೆ ನೀಡಬೇಕೆಂದು ವಿನಂತಿಸಿದ್ದಾರೆ. ಕಾರಂತರ ಹೆಸರಿಗೆ ಬ... ಡಿಮ್ಯಾಂಡ್ ಡ್ರಾಫ್ಟ್ ಅಥವಾ ಪೋಸ್ಟ... ಆರ್ಡರ್‌ಗಳನ್ನು : ಸುರೇಶ್ ಹೆಬ್ಳೀಕ... 506, 3ನೇ ಬ್ಲಾಕ್, ಜಯನಗರ, ಬೆಂಗಳೂರು-11, ಈ ವಿಳಾಸಕ್ಕೆ ಕಳಿಸಬಹುದು.

ಇದಲ್ಲದೆ, ಚುನಾವಣಾ ಪ್ರಚಾರ ಕಾರ್ಯದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಸ್ವ ಇಚ್ಛೆಯಿಂದ ಕಾರವಾರಕ್ಕೆ ಬಂದು ನೆರವಾಗಬೇಕೆಂದು ಪರಿಸರ ಕಾರ್ಯಕರ್ತರಾದ ಚಿತ್ರ ನಟ ಸುರೇಶ್ ಹೆಬ್ಳೀಕರ್ ಮತ್ತು ಪತ್ರಕರ್ತ ನಾಗೇಶ್ ... ಮನವಿ ಮಾಡಿದ್ದಾರೆ. ಶೃಂಗೇರಿ, ಕೊ... ತಾ||ಗಳ ಮತ್ತು ಚಿಕ್ಕಮಗಳೂರು ... ಪರಿಸರ ಜಾಗೃತಿ ವೇದಿಕೆಗಳ ಕೆಲ ... ಕಾರ್ಯಕರ್ತರು ಕಾರವಾರಕ್ಕೆ ಹೋಗಲು ಸಿದ್ಧತೆಯಲ್ಲಿದ್ದಾರೆ.

ಓದುಗರ ಪತ್ರಗಳು

## ರಸ್ತೆ ದುರಸ್ತಿಪಡಿಸಿ

ಮಾನ್ಯರೆ,

ಕೊಪ್ಪ ತಾಲ್ಲೂಕಿನ ಮೇಗೂರು ಮುಂದುವರಿಯುತ್ತಿರುವ ಹಳ್ಳಿ. ಇಲ್ಲಿಗೆ ಶೃಂಗೇರಿ-ಜಯಪುರ ಮಾರ್ಗದ ನಡುವಿನ ಗಡಿಕಲ್ಲಿನಿಂದ ರಸ್ತೆ ಇದೆ. ಈ ರಸ್ತೆಯಲ್ಲಿ ಭೈರೇದೇವರು-ಮೇಗೂರು ಭಾಗ ತೀರಾ ಹದಗೆಟ್ಟಿದೆ. ಇಲ್ಲಿ ಡಾಮರು ಹಾಕಿಲ್ಲ. ದಿನನಿತ್ಯ 3 ಬಸ್ಸುಗಳೂ ಇತರ ವಾಹನಗಳೂ ಈ ರಸ್ತೆಯ ಮೇಲೆ ಓಡಾಡಬೇಕಾಗಿದೆ. ಆದರೆ ಈ ರಸ್ತೆಯಲ್ಲಿ ನಡೆದಾಡುವುದೇ ಕಷ್ಟ! ರಸ್ತೆಗೆ ಬೇಸಿಗೆ ಕಾಲದಲ್ಲಿ ಮಣ್ಣು ಹಾಕುತ್ತಾರೆ. ಆದರೆ ಅದು ಮಳೆ ಬಂತೆಂದರೆ ತೊಳೆದು ಹೋಗುತ್ತದೆ

ಆದ್ದರಿಂದ ಈ ರಸ್ತೆಗೆ ಡಾಮರು ಹಾಕಬೇಕಾಗಿದೆ. ಲೋಕೋಪಯೋಗಿ ಇಲಾಖೆಯವರು ಮತ್ತು ಇತರ ಸಂಬಂಧಪಟ್ಟವರು ಇತ್ತ ಗಮನಹರಿಸುವರೆ?

—ನೊಂದ ಪ್ರಯಾಣಿಕರು,
ಮೇಗೂರು.

## ಮತಗಟ್ಟೆವಾರು ಮತ ಎಣಿಕೆ ಗುಪ್ತ ಮತದಾನ ತತ್ವಕ್ಕೆ ವಿರುದ್ಧ

ಮಾನ್ಯರೆ,

ನಮ್ಮ ದೇಶದಲ್ಲಿ 'ಗುಪ್ತ ಮತದಾನ ಪದ್ಧತಿ'ಯನ್ನು ಅಂಗೀಕರಿಸಿದ್ದೇವೆ. ಆದರೆ ಮತಗಳ ಎಣಿಕೆ ಮತ್ತು ಪ್ರಕಟಣೆ ಇಂದು ಕೂಡ ಆಯಾ ಮತಗಟ್ಟೆವಾರು ನಡೆಯುತ್ತಿದೆ. ಇದರಿಂದ ಯಾವ ಅಭ್ಯರ್ಥಿಗೆ ಯಾವ ಪ್ರದೇಶದ ಜನ ಎಷ್ಟೆಷ್ಟು ಮತ-ಬೆಂಬಲ ನೀಡಿದರು ಎಂಬುದು ಬಹಿರಂಗವಾಗುತ್ತದೆ. ಇದರ ಸತ್ಪರಿಣಾಮಗಳೇನೇ ಇರಲಿ, ದುಷ್ಪರಿಣಾಮಗಳನ್ನು ಮಾತ್ರ ಒಬ್ಬ ವ್ಯಕ್ತಿಯಲ್ಲ, ಇಡೀ ಮತಗಟ್ಟೆಗೆ ಸೇರಿದ ಎಲ್ಲಾ ಮತದಾರರೂ ಅನುಭವಿಸಬೇಕಾಗುತ್ತದೆ. ಇದು ಗುಪ್ತ ಮತದಾನ ವ್ಯವಸ್ಥೆಯ ಆಶಯಕ್ಕೇ ಧಕ್ಕೆ ಉಂಟು ಮಾಡುತ್ತದೆಂಬುದು ನಿರ್ವಿವಾದ.

ಆದ್ದರಿಂದ, ಮತ ಎಣಿಕೆ ಕೇಂದ್ರದಲ್ಲಿ, ಎಲ್ಲಾ ಮತಗಟ್ಟೆಗಳ ಪೆಟ್ಟಿಗೆಗಳನ್ನು ಒಟ್ಟಿಗೇ ತೆರೆದು, ಮತ ಪತ್ರಗಳನ್ನೆಲ್ಲ ಒಟ್ಟಿಗೆ ಸೇರಿಸಿ, ಒಟ್ಟಾಗಿಯೇ ಎಣಿಸುವುದು ಅತ್ಯಂತ ಸೂಕ್ತ ಎಂಬುದು ನನ್ನಂಥ ಎಲ್ಲ ಮತದಾರರ ಅಭಿಪ್ರಾಯವಾಗಿದೆ. ಈಗಾಗಲೇ ಚುನಾವಣಾ ಕಾಯ್ದೆಗೆ ಕಾಲಕಾಲಕ್ಕೆ ಅನೇಕ ತಿದ್ದುಪಡಿಗಳನ್ನು ಮಾಡಲಾಗಿದ್ದು, ಮೇಲ್ಕಂಡ ವಿಚಾರದಲ್ಲಿ ಕೂಡ ಸೂಕ್ತ ತಿದ್ದುಪಡಿ ಅವಶ್ಯವೆಂದು ಭಾವಿಸುತ್ತೇನೆ. ಈ ಸಲಹೆ ಆಳವಾದ ವಿಮರ್ಶೆಗೊಳಪಟ್ಟು ಕಾರ್ಯರೂಪಕ್ಕೆ ಬರಲೆಂದು ಹಾರೈಸುತ್ತೇನೆ

—ಸುಗ್ಗಿಮಕ್ಕಿ ವೆಂಕಟಕೃಷ್ಣಪ್ಪ,
ಹರಿಹರಪುರ

## ಕೊಪ್ಪಕ್ಕೊಂದು ಪಾರ್ಕ್ ಬೇಕು

ಮಾನ್ಯರೆ,

ಮಲೆನಾಡಿನ ಮಡಿಲಲ್ಲಿರುವ ತಾಲ್ಲೂಕು ಕೇಂದ್ರ ಹಾಗೂ ಹಲವು ಇಲಾಖೆಗಳಿಗೆ ಕೇಂದ್ರವಾದ ಕೊಪ್ಪದಲ್ಲಿ ಈಗ ಶಾಲೆ-ಕಾಲೇಜುಗಳು, ದೊಡ್ಡ ಆಟದ ಮೈದಾನ, ಬಯಲು ರಂಗ ಮಂದಿರ ಸಿನಿಮಾಮಂದಿರ, ದೊಡ್ಡ ಆಸ್ಪತ್ರೆ ಮುಂತಾಗಿ ಹಲವು ಸೌಕರ್ಯಗಳಿವೆ.

ಆದರೆ ಇಷ್ಟು ದೊಡ್ಡ ಊರಿನಲ್ಲಿ ಒಂದೂ ಪಾರ್ಕ್ ಇಲ್ಲದಿರುವುದು ದೊಡ್ಡ ಕೊರತೆಯೇ ಸರಿ. ನಾನಾ ವೃತ್ತಿ-ಉದ್ಯಮಗಳವರು ಇಡೀ ದಿನದ ತಮ್ಮ ದುಡಿಮೆಯ ನಂತರ ಸಂಜೆ ಸ್ವಲ್ಪ ಹೊತ್ತು ಸ್ವಚ್ಛ ಗಾಳಿ ಸೇವಿಸಿ, ದೇಹದ ಮತ್ತು ಮನಸ್ಸಿನ ದಣಿವನ್ನು ನೀಗಿಸಿಕೊಂಡು, ಮನೋಲ್ಲಾಸ ಮೂಡಿಸಿಕೊಳ್ಳಲು ಪಾರ್ಕ್ ಎಷ್ಟು ಅವಶ್ಯ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ

ಇಂಥದೊಂದು ಪಾರ್ಕಿಗೆ ಕೊಪ್ಪ ಟೌನ್ ಹಾಲ್‌ನ ಆವರಣ ಅತ್ಯಂತ ಪ್ರಶಸ್ತವಾಗಿದೆ. ಆದ್ದರಿಂದ ಸಂಬಂಧಪಟ್ಟವರು, ಇದಕ್ಕಾಗಿ ಸ್ವಲ್ಪ ಹಣ ಖರ್ಚಾಗುವುದನ್ನು ಲೆಕ್ಕಿಸದೆ, ಊರಿನ ಶಾಂತಿ ಪ್ರಿಯ ನಾಗರಿಕರಿಗೆ, ಗೃಹಿಣಿಯರಿಗೆ, ಮಕ್ಕಳಿಗೆ ಅತ್ಯುಪಯುಕ್ತವಾದ ಒಂದು ಪಾರ್ಕ್ ನಿರ್ಮಿಸಿ, ಅದು ಸದಾ ಕಾಲ ಅಚ್ಚುಕಟ್ಟಾಗಿರುವಂತೆ ವ್ಯವಸ್ಥೆ ಮಾಡಬೇಕಾಗಿ ಕೋರುತ್ತೇನೆ.

—ಆಲ್‌ಫ್ರೆಡ್ ಡಿ'ಸೋಜಾ,
ಬಾಳಗಡಿ ರಸ್ತೆ, ಕೊಪ್ಪ.

## ಪ್ರೌಢಶಾಲೆ ಆಟೋಟ : ಸೈಯದ್, ಸುಧಾ ಪ್ರಥಮ

ಜಯಪುರ : ಇಲ್ಲಿನ ಪ್ರೌಢಶಾಲೆಯ ಆಶ್ರಯದಲ್ಲಿ ನ. 7 ಮತ್ತು 8ರಂದು ನಡೆದ ಕೊಪ್ಪ ತಾ॥ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಕೊಪ್ಪ ಪದವಿ ಪೂರ್ವ ಕಾಲೇಜಿನ ಸೈಯದ್ ಬಾಶಾ ಅಮ್ಜದ್ ಬಾಲಕರ ವಿಭಾಗದಲ್ಲೂ, ನಾರ್ವೆ ಪ್ರೌಢಶಾಲೆಯ ಸುಧಾ ಬಾಲಕಿಯರ ವಿಭಾಗದಲ್ಲೂ ಛಾಂಪಿಯನ್ ಪ್ರಶಸ್ತಿ ಪಡೆದರು

ಬಾಲಕರ ವಿಭಾಗದ ಸಮಗ್ರ ಪ್ರಶಸ್ತಿಯನ್ನು ಕೊಪ್ಪ ಪ.ಪೂ. ಕಾಲೇಜು ತಂಡವೂ, ಬಾಲಕಿಯರ ವಿಭಾಗದಲ್ಲಿ ಹರಿಹರಪುರ ...॥ ಕಾಲೇಜು ತಂಡವೂ ಪಡೆದವು. 2ನೇ ...ಸ್ಥಾನ ಕ್ರಮವಾಗಿ ಹರಿಹರಪುರ ತಂಡ ಮತ್ತು ಕೊಪ್ಪ ಕಾನ್ವೆಂಟ್ ತಂಡಗಳಿಗೆ ...ಕ್ಕಿತು.

ಸೈಯದ್ ಮತ್ತು ಸುಧಾ ರಾಜ್ಯ ವಿದ್ಯಾ... ಕ್ರೀಡಾ ನಿಧಿಯಿಂದ ತಲಾ 100 ರೂ. ...ಗದು ಬಹುಮಾನ ಗಳಿಸಿದರು.

(ವರದಿ : ಹಾ.ಅ. ಗೋಪಾಲ್ )

## ಸ್ವಯಂಸೇವಾ ಸಂಘಟನೆಗಳ ಕಾರ್ಯಾಗಾರ

ಉತ್ತಮೇಶ್ವರ: ಇಲ್ಲಿನ ಸ್ವಯಂ ಸೇವಾ ಕೇಂದ್ರದ ಆಶ್ರಯದಲ್ಲಿ ಸುತ್ತಮುತ್ತಲಿನ ಯುವ ಜನ ಸಂಘಗಳ ಮತ್ತು ಸ್ವಯಂ ಸೇವಾ ಸಂಘ – ಸಂಸ್ಥೆಗಳ ಪ್ರತಿನಿಧಿಗಳ ಕಾರ್ಯಾಗಾರವೊಂದು ಇಲ್ಲಿ ನ. 5ರಂದು ಪತ್ರಕರ್ತ ಮತ್ತು ಪರಿಸರ ಕಾರ್ಯಕರ್ತ ಶಂಪಾ ದೈತೋಟ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ವೈದ್ಯಕೀಯ ವಿಜ್ಞಾನ ಕುರಿತು ಡಾ॥ ಎಂ. ಜಿ. ಪ್ರಸಾದ್, ಮಾನಸಿಕ ರೋಗಗಳು ಮತ್ತು ಆತ್ಮಹತ್ಯಾ ಪ್ರಕರಣಗಳನ್ನು ತಡೆಗಟ್ಟುವಿಕೆ ಕುರಿತು ತೀರ್ಥಹಳ್ಳಿಯ ಡಾ॥ ಅರುಣಾಚಲ, ಪಯಸ್ಕರ ಶಿಕ್ಷಣ, ಸಾಮಾಜಿಕ ಅರಣ್ಯ, ಯುವಜನ ಸೇವೆ ಮತ್ತು ಶಿಶು ಕಲ್ಯಾಣ – ಇವುಗಳಲ್ಲಿ ಸ್ವ ಸೇ. ಸಂಘಟನೆಗಳ ಪಾತ್ರ ಕುರಿತು ಎ. ಟಿ. ಚಾಮರಾಜ್, ಚಂದ್ರಶೇಖರ ಆಚಾರ್, ಕರುಣಾಕರ ಶೆಟ್ಟಿ ಮತ್ತು ರಾಜೇಂದ್ರ ಬೇಕಲ್–ಇವರುಗಳು ಭಾಷಣ ಮತ್ತು ಮಾರ್ಗದರ್ಶನ ಮಾಡಿದರು.

ಉ. ಕನ್ನಡದ ಸ್ನೇಹ ಕುಂಜದ ಬಿ.ಎ. ವೆಂಕಟೇಶ್ ಗ್ರಾಮೀಣ ಕಾರ್ಯಕ್ರಮಗಳ ಸಂಯೋಜನೆ ಕುರಿತು ಹಾಗೂ ಶಂಪಾ ದೈತೋಟ ಪರಿಸರ ಸಂರಕ್ಷಣೆ ಕುರಿತು ಮಾಹಿತಿ–ಮಾರ್ಗದರ್ಶನ ನೀಡಿದರು.

ಸ್ಥಳೀಯ ಮೈಸೂರು ಬ್ಯಾಂಕ್, ಸ್ಪೋರ್ಟ್ಸ್ ಕ್ಲಬ್, ಮಹಿಳಾ ಮಂಡಳಿ, ಯುವಕ ರೈತ ಸಂಘ ಮತ್ತು ಕೊಪ್ಪದ ಲಯನ್ಸ್ ಕ್ಲಬ್ ಸಹಯೋಗ ನೀಡಿದ್ದ ಈ ಕಾರ್ಯಾಗಾರದಲ್ಲಿ 12 ಸಂಘ–ಸಂಸ್ಥೆಗಳು ಪಾಲ್ಗೊಂಡು ಕೆಲವು ಕನಿಷ್ಠ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಿದವು.

### ಸ್ವ–ಉದ್ಯೋಗಿಗೆ ಸನ್ಮಾನ

ಬಸರಿಕಟ್ಟೆ : ನಿರುದ್ಯೋಗಿ ವಿದ್ಯಾವಂತರ ಸ್ವಯಂ ಉದ್ಯೋಗ ಯೋಜನೆಯಲ್ಲಿ ಪಡೆದ ಸಾಲವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಉತ್ತಮವಾಗಿ ಮರು ಪಾವತಿ ಮಾಡುತ್ತಿರುವ ಆಂಡ್ರ್ಯೂ ಗಾಮ ಅವರನ್ನು ಈಚೆಗೆ ಇಲ್ಲಿನ ಸಿಂಡಿಕೇಟ್ ಬ್ಯಾಂಕ್ ಮತ್ತು ಇತರ ಸಂಘ–ಸಂಸ್ಥೆಗಳ ಆಶ್ರಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸನ್ಮಾನಿಸಲಾಯಿತು.

### ಚುನಾವಣೆ ಅಂಕಿ–ಅಂಶಗಳು

(2ನೇ ಪುಟದಿಂದ)

1984 ರ ಡಿಸೆಂಬರ್‌ನಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಬಿ ಕೆ. ಸುಂದರೇಶ್‌ಗಿಂತ ಕಾಂಗ್ರೆಯ ಡಿ. ಕೆ. ತಾರಾದೇವಿಗೆ 1,40,060 ಹೆಚ್ಚು ಮತಗಳು ಬಂದಿದ್ದವು.

ಲೋಕಸಭೆಯ ಮತ ಚೀಟಿ ಬಿಳಿ ಬಣ್ಣದ್ದಾಗಿದ್ದು, ವಿಧಾನ ಸಭೆಯ ಮತ ಚೀಟಿ ನಸು ಕೆಂಪು (ಪಿಂಕ್) ಬಣ್ಣದ್ದಾಗಿರುತ್ತದೆ ಎಂದು ಪ್ರಕಟಿಸಲಾಗಿದೆ.

## ನ.14ರಂದು ಜೇಸಿ ವತಿಯಿಂದ ರಕ್ತ ಪರೀಕ್ಷೆ ಮತ್ತು ಗುಂಪು ವಿಂಗಡಣೆ ಶಿಬಿರ

ಕೊಪ್ಪ : ಇಲ್ಲಿನ ಜೂನಿಯರ್ ಛೇಂಬರ್‌ನವರು ನ 14 ರಂದು ಮಕ್ಕಳ ದಿನಾಚರಣೆ ಮತ್ತು ನೆಹರೂ ಶತಮಾನೋತ್ಸವದ ಅಂಗವಾಗಿ ಕೊಪ್ಪ ಪಟ್ಟಣದ 1 ರಿಂದ 7ನೇ ತರಗತಿವರೆಗಿನ ಶಾಲಾ ಮಕ್ಕಳಿಗಾಗಿ ಛದ್ಮ ವೇಷ ಸ್ಪರ್ಧೆಯನ್ನು ಬೆಳಗ್ಗೆ 9 ಗಂಟೆಗೆ ಏರ್ಪಡಿಸಿದ್ದಾರೆ.

ಬೆಳಗ್ಗೆ 10–30 ಕ್ಕೆ ಉಚಿತ ರಕ್ತ ಪರೀಕ್ಷೆ ಮತ್ತು ರಕ್ತದ ಗುಂಪು ವಿಂಗಡಣೆ ಶಿಬಿರವನ್ನು ಪುರಭವನದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಈ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ.

ಅಂತೆಯೇ ರಕ್ತದಾನ ಮಾಡಲಿಚ್ಛಿಸುವವರ ನೋಂದಣಿಯನ್ನೂ ಸಂಸ್ಥೆ ಅಂದು ಮಾಡುತ್ತದೆ.

### ದ.ಸಂ.ಸ. ಸ್ವತಂತ್ರ ಸ್ಪರ್ಧೆ

(2ನೇ ಪುಟದಿಂದ)

ಗಳಿಗೆಯಲ್ಲಿ ನಕಾರಾತ್ಮಕ ಧೋರಣೆ ತಳೆದುದರಿಂದ ಒಡಂಬಡಿಕೆ ಅಸಾಧ್ಯವಾಯಿತು ಎಂದು ದ.ಸಂ.ಸ. ನಾಯಕರು ಹೇಳಿದ್ದಾರೆ.

ಇದೀಗ ಎಡ ಪಕ್ಷಗಳು ಮತ್ತು ಪ್ರಗತಿಪರ ಶಕ್ತಿಗಳೊಡಗೂಡಿ 1 ಲೋಕಸಭೆ ಮತ್ತು 8 ವಿಧಾನ ಸಭೆ ಸ್ಥಾನಗಳಿಗೆ ದ ಸಂ. ಸ. ಸ್ವತಂತ್ರವಾಗಿ ಸ್ಪರ್ಧಿಸಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂಡಿಗೆರೆ ಕ್ಷೇತ್ರದಿಂದ ದ. ಸಂ. ಸ. ರಾಜ್ಯ ಸಂಘಟನಾ ಸಂಚಾಲಕ ಎಂ. ಡಿ. ಗಂಗಯ್ಯ ಉಮೇದುವಾರರಾಗಿದ್ದಾರೆ.

## ಕೊಪ್ಪದಲ್ಲಿ ರಾ॥ ಗ್ರಂಥಾಲಯ ಸಪ್ತಾಹ

...ಪ್ಪ: 14.11.89ರಿಂದ 20.11 89ರ...ಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ...ಪ್ರಯುಕ್ತ ಕೊಪ್ಪದ ಸಾರ್ವಜನಿಕ ...ಥಾಲಯದಲ್ಲಿ ಪುಸ್ತಕ ಪ್ರದರ್ಶನ ಏ...ಡಿಸಲಾಗುತ್ತದೆ. ಅಲ್ಲದೆ, ಗ್ರಂಥಾಲಯ ಸಾರ್ವಜನಿಕರನ್ನು ಹೆಚ್ಚಿನ ಸಂಖ್ಯೆ...ಲ್ಲಿ ಸದಸ್ಯರನ್ನಾಗಿಸುವ ಕಾರ್ಯಕ್ರಮ...ಅಂಗವಾಗಿ ಗ್ರಂಥಾಲಯ ಸಿಬ್ಬಂದಿ ...ಮನೆಗೆ ಭೇಟಿ ಕೊಡಲಿದ್ದಾರೆ.

...ರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ...ರಾಗಿ ಈ ಕಾರ್ಯಕ್ರಮ ಯಶಸ್ವಿ...ಸಬೇಕೆಂದೂ, ಪುಸ್ತಕ ಪ್ರದರ್ಶನದ ...ಯೋಜನ ಪಡೆದುಕೊಳ್ಳಬೇಕೆಂದೂ ಶಾಖಾ ಗ್ರಂಥಾಲಯ ಸಹಾಯಕ ಐ. ಪಿ. ಚಿಕ್ಕೂರ್ ವಿನಂತಿಸಿದ್ದಾರೆ.

### ಮ್ಯಾಮ್ಕೋಸ್‌ನಲ್ಲಿ ಅಡಿಕೆ ವ್ಯಾಪಾರ ಆರಂಭ

ಕೊಪ್ಪ : ಶಿವಮೊಗ್ಗದ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘದ ಕೊಪ್ಪ ಮತ್ತು ಶೃಂಗೇರಿ ಶಾಖೆಗಳಲ್ಲಿ ಸುಗ್ಗಿ ಕಾಲದ ಮೊದಲ ವ್ಯಾಪಾರ ತಾ॥ 19-11-89ರ ಭಾನುವಾರದಿಂದ ಆರಂಭವಾಗುತ್ತದೆ. ಧಾರಣೆಗಳು ಹೀಗಿವೆ : (ಹೊಸ ಅಡಿಕೆ)

ಹಸ : 2800-3200
ಚಿಟ್ಟೆ : 2300-2700
ಗೊರಬಲು : 1200-1560

# ಕತ್ತಿಯಿಂದ ಹಲ್ಲೆ : ಪರಸ್ಪರ ದೂರು

ಕೊಪ್ಪ : ಕಳೆದ ತಿಂಗಳು ಕಾರ್ಕಳ ವಲಯ ಅರಣ್ಯಾಧಿಕಾರಿ ಕಛೇರಿಯಿಂದ ಕಾರಿನ ಟೈರು ಕಳವಿನ ಹಿನ್ನೆಲೆಯಲ್ಲಿ ಎಂ. ಆರ್. ಭಾಸ್ಕರರಾವ್ ಮಗ ರಮೇಶ ಮತ್ತು ಕೊರಗ ಶೆಟ್ಟರ ಮಗ ಜಯಂತ ಇವರ ನಡುವೆ ಹೊಗೆಯಾಡುತ್ತಿದ್ದ ದ್ವೇಷ ನ 10 ರ ರಾತ್ರಿ ಪರಸ್ಪರ ಹೊಡೆದಾಟಕ್ಕೆ ಮುಟ್ಟಿದ್ದಾಗಿ ವರದಿಯಾಗಿದೆ.

ಜಯಂತ ಮತ್ತು ಪುಷ್ಪರಾಜ ಶೆಟ್ಟಿ ಇವರುಗಳು ರಾತ್ರಿ ಭಾಸ್ಕರರಾವ್ ಮನೆಗೆ ಕತ್ತಿ ಹಿರಿದು ನುಗ್ಗಿ, ಮಲಗಿದ್ದ ರಮೇಶ ಮತ್ತು ಅಣ್ಣ ಮೋಹನನಿಗೆ ಕತ್ತಿಯಿಂದ ಕಡಿದಿರುವುದಾಗಿ ರಮೇಶ ದೂರು ನೀಡಿದ್ದಾರೆ.

ಜಯಂತ ನೀಡಿರುವ ದೂರಿನಲ್ಲಿ, ತಾವುಗಳು ವಿಡಿಯೋಗೆ ಹೋಗುತ್ತಿದ್ದಾಗ ಭಾಸ್ಕರರಾವ್ ಮತ್ತು ರಮೇಶ, ಮೋಹನ ಅವರ ಅಂಗಡಿಯೆದುರು ರಸ್ತೆಯಲ್ಲಿ ಕಾರನ್ನು ಅಡ್ಡ ಹಾಕಿ ಕತ್ತಿಯಿಂದ ಹಲ್ಲೆ ನಡೆಸಿದ್ದಾಗಿ ಆರೋಪಿಸಿದ್ದಾರೆ.

ಎರಡೂ ಕಡೆಯವರಿಗೆ ಕತ್ತಿಯ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ದಫೇದಾರ್ ಗಂಗಪ್ಪ ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದಾರೆ.

ಭಾಸ್ಕರರಾವ್ ಅವರ ಅಳಿಯನೇ ಆಗಿರುವ ಕಾರ್ಕಳ ರೇಂಜರ್ ಅವರ ಆವರಣದಿಂದ ಗಂಧದ ಕಾರೊಂದರ ಟಯರುಗಳನ್ನು ಕದ್ದಿರುವುದಾಗಿ ಜಯಂತ, ಪುಷ್ಪರಾಜ್ ಮತ್ತು ಭಾಸ್ಕರರಾವ್ ಮಗ ಸೂರ್ಯನಾರಾಯಣ ಇವರ ಮೇಲೆ ಮಂಗಳೂರು ಪೋಲೀಸರು ಮೊಕದ್ದಮೆ ದಾಖಲಿಸಿದ್ದು, ಅವರು ಟೆಯರ್ ವಶ ಪಡಿಸಿಕೊಳ್ಳಲು ಬಂದಾಗ ಭಾಸ್ಕರ ರಾವ್ ಮಗ ರಮೇಶನೇ ಪೋಲೀಸರನ್ನು ಕರೆದೊಯ್ದು ಕೊರಗ ಶೆಟ್ಟರ ಕಾರನ್ನು ಅವಮಾನಕರ ಮಾಡಿಸಿದನೆಂಬ ದ್ವೇಷವೇ ಈ ಹಲ್ಲೆಗೆ ಕಾರಣ ಎಂದು ಹೇಳಲಾಗಿದೆ. ಆಗಿನಿಂದಲೂ ಸೂರ್ಯನಾರಾಯಣ ತಲೆ ಮರೆಸಿಕೊಂಡಿದ್ದು, ಉಳಿದವರು ಬಂಧಿಸಲ್ಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು.

## ಕೊಪ್ಪ ಸುತ್ತಮುತ್ತ 3 ಆತ್ಮಹತ್ಯೆ ಪ್ರಕರಣಗಳು

ಕೊಪ್ಪ: ಕೊಡಿಗೆಹಿತ್ಲು ಎಸ್ಟೇಟಿನ ಸದಾಶಿವ (28) ಎಂಬ ಕಾರ್ಮಿಕ ನ. 3ರ ರಾತ್ರಿ ಬಪ್ಪುಂಜಿಗೆ ಸಮೀಪದ ಕೂಲಿ ಲೈನಿನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತನ್ನ ಮತ್ತು ಹೆಂಡತಿಯ ಸತತ ಅನಾರೋಗ್ಯವೇ ಆತ್ಮಹತ್ಯೆಗೆ ಕಾರಣವೆನ್ನಲಾಗಿದೆ.

ಗಡಿಕಲ್ ಬಳಿಯ ಗಣಪತಿ ಕಟ್ಟೆಯ ರಾಮ ಎಂಬ ಕೃಷಿ ಕಾರ್ಮಿಕ ನ 8ರಂದು ನೇಣು ಹಾಕಿಕೊಂಡು ಸಾವನ್ನಪ್ಪಿದ್ದಾರೆ. ದಂಪತಿಗಳ ನಡುವಿನ ವಿರಸವೇ ಕಾರಣ ಎನ್ನಲಾಗಿದೆ.

ಹುಲುಮಗ್ಗಿಯ ಶೃಂಗೇಶ್ವರಯ್ಯ ಎಂಬ ಅಡಿಕೆ ಕೊನೆ ವೃತ್ತಿಯ ಬ್ರಾಹ್ಮಣ ವ್ಯಕ್ತಿ ನ 10 ರಂದು ವಿಷ ಸೇವಿಸಿ, ಕೊಪ್ಪ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಸಂಸಾರದ ಹೊರೆ, ಹಣ ಕಾಸಿನ ಮುಗ್ಗಟ್ಟು ಆತ್ಮಹತ್ಯೆಗೆ ಕಾರಣವೆನ್ನಲಾಗಿದೆ. ದಫೇದಾರ್ ಗಂಗಪ್ಪ ತನಿಖೆ ನಡೆಸಿ, ಕ್ರಮ ಕೈಗೊಂಡಿದ್ದಾರೆ.





ಸಂಪಾ , ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.